ದಿನಾಂಕ 27.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ. ಟಿ ಎನ್ ಎಸ್ ವಕೀಲರಿಂದಃ**

ವಾದಿಯ ಮಗ ಸಿಸಿ 966/2023 ರಲ್ಲಿ ನನ್ನನ್ನು ಸೇರಿದಂತೆ ಒಟ್ಟು 9 ಜನರ ಮೇಲೆ ಕೇಸನ್ನು ದಾಖಲಿಸಿದ್ದು ಸದರಿ ಕೇಸನಲ್ಲಿ ನಾನು ಹಾಜರಾಗುತ್ತಿದ್ದೇನೆ ಎಂದರೆ ಸರಿ. ನನ್ನ ಮಗಳಾದ ಎದುರುದಾರಳು ವಾದಿಯ ವಿರುದ್ದ ಹಾಗೂ ಆತನ ತಾಯಿ, ತಮ್ಮ ಹಾಗೂ ಅವರ ಸಂಬಂಧಿಕರ ಮೇಲೆ ಕೇಸನ್ನು ಹಾಕಿದ್ದಾರೆ ಎಂದರೆ ಆಕೆಯನ್ನು ನೋಡಿಕೊಳ್ಳದೆ ಇರುವ ಕಾರಣ ಹಾಕಿದ್ದಾಳೆ ಎಂದು ನುಡಿಯುತ್ತಾರೆ. ಕೌಟುಂಬಿಕ ಕಾಯಿದೆಯಲ್ಲೂ ಕೇಸನ್ನು ಹಾಕಿದ್ದಾಳೆ ಎಂದರೆ ಸರಿ. ಸದರಿ ಕೇಸಗಳನ್ನು ಆಕೆ ನಮ್ಮನ್ನು ಕೇಳದೆ ಹಾಕಿದ್ದಾಳೆ. ಸದರಿ ಕೇಸನಲ್ಲಿ ನಾನು, ನನ್ನ ಮಗ, ನನ್ನ ಯಜಮಾನರು ಎಲ್ಲರು ಸಾಕ್ಷಿದಾರರು ಎಂದರೆ ಸರಿ. ಕೇಸುಗಳ ವಿಚಾರವಾಗಿ ನಾನು ನನ್ನ ಯಜಮಾನರು ಅರ್ಜಿದಾರರ ಜೊತೆ ಮಾತನಾಡಿದ್ದೇವೆ. ಕೇಸು ಹಾಕುವ ಮೊದಲು ಮಾತನಾಡಿದ್ದೇವೆ. ನನ್ನ ಮಗಳನ್ನು ಅರ್ಜಿದಾರರ ಮೇಲೆ ಕೇಸನ್ನು ಹಾಕಬೇಡ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿಯು ನನ್ನ ಮಗಳಿಗೆ ಕೇಸನ್ನು ಹಾಕಬೇಡ ಎಂದು ಹೇಳಿದ್ದೆ ಆದರೆ ಅವಳು ನನಗೆ ಹಿಂಸೆ ಕೊಡುತ್ತಾರೆ ಎಂದು ಪೊಲಿಸರ ಬಳಿ ಹೋಗಿದ್ದು ಅಲ್ಲಿ ಕೇಸ ಹಾಕಿದ್ದಾರೆ. ಕೇಸನ್ನು ವಾಪಸ್ಸು ತೆಗೆದುಕೋ ಎಂದು ನಾನು ಮಗಳಿಗೆ ಹೇಳಿಲ್ಲ. ನಾನು, ನನ್ನ ಯಜಮಾನರು ಸೇರಿ ನನ್ನ ಅಳಿಯನನ್ನು ಹೊಡೆದಿದ್ದು ಅವರು ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸಾಕ್ಷಿ ಅವರು ಆಸ್ಪತ್ರೆಯಲ್ಲಿದ್ದರು ಆದರೆ ಅವರನ್ನು ನಾವು ಹೊಡೆದಿಲ್ಲ ಎಂದು ನುಡಿಯುತ್ತಾರೆ. ಅವರು ಒಂದು ತಿಂಗಳ ಕಾಲ ಕೋಲಾರದ ಜಾಲಪ್ಪ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನಾನಾಗಲೀ, ನನ್ನ ಮಗಳಾಗಲೀ ಆಸ್ಪತ್ರೆಗೆ ಹೋಗಿ ವಿಚಾರಿಸಿದ್ದೀರಾ ಎಂದರೆ ಹೋಗಿರುತ್ತೇವೆ ಅವರು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 2022 ಮಾರ್ಚ ತಿಂಗಳಲ್ಲಿ ದಾಖಲಾಗಿದ್ದರು. ಅವರಿಗೆ ನಾವು ಹೊಡೆದಿದ್ದರಿಂದ ಅವರಿಗೆ 3 ಬಾರಿ ಶಸ್ತ್ರ ಚಿಕಿತ್ಸೆ ಆಗಿದೆ ಎಂದರೆ ಸಾಕ್ಷಿಯು ನಾವು ಅವರಿಗೆ ಬೆರಳು ಕೂಡ ತಾಗಿಸಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮೊಮ್ಮಕ್ಕಳ ಜೊತೆಗೆ ಕಳೆದ ತಿಂಗಳಲ್ಲಿ ಮಾತನಾಡಿಸಿದ್ದೇನು ಆದರೆ ಅವರು ಅಪ್ಪ ಬೈದಿದ್ದಾರೆ ಎಂದು ಮಾತನಾಡದೇ ಓಡಿ ಹೋಗಿರುತ್ತಾರೆ. ರಾಯಲ್ ಸರ್ಕಲ್ ಬಳಿ ದೇವಸ್ಥಾನದ ದಾರಿಯಲ್ಲಿ ಮೊಮ್ಮಕ್ಕಳು ಸಿಕ್ಕಿದ್ದರು. ಅವರನ್ನು ಆಗ ಆಗ್ಗೆ ನೋಡುತ್ತಿರುತ್ತೇನೆ. ದಿನ ಮಾತನಾಡಿಸುತ್ತೀರಾ ಎಂದರೆ ಅವರು ಒಂದು ಬಾರಿ ಮಾತನಾಡುತ್ತಾರೆ ಒಂದು ಬಾರಿ ಮಾತನಾಡುವುದಿಲ್ಲ. ರಾಯಲ್ ಶಾಲೆಯಲ್ಲಿ ಓದುತ್ತಿದ್ದಾಳೆ. ಮೊಮ್ಮಗ ಚಿಕ್ಕಬಳ್ಳಾಪುರದಲ್ಲಿ ಎಲ್ ಎಲ್ ಬಿ ಮಾಡುತ್ತಿದ್ದಾನೆ. ಅವಳು ಅವರ ಅಪ್ಪ ಬೈಯ್ಯುತ್ತಾನೆ ಎಂದು ಭಯ ಬಿದ್ದು

ಮಾತನಾಡುತ್ತಾರೆ. ನಾವು ಹೊಡೆಯುತ್ತೇವೆ ಎಂದು ಅವರು ಭಯ ಬೀಳುತ್ತಾರೆ ಎಂದರೆ ಸರಿಯಲ್ಲ.

ನನ್ನ ಮಗಳು ಯಾರ ಮೇಲೆ ಕಂಪ್ಲೇಟ್ ಕೊಟ್ಟಿದ್ದಾರೆ ಎಂದರೆ ಅವಳನ್ನು ಯಾರು ಹೊಡೆದು ಮನೆಯಿಂದ ಹೊರಗೆ ಹಾಕಿದ್ದಾರೋ ಅವರ ಮೇಲೆ ಕೊಟ್ಟಿದ್ದಾರೆ. ತಹಶೀಲ್ದಾರ್ ಮತ್ತು ಡೆಪ್ಯೂಟಿ ಕಮಿಷನರ್ ಕಡೆ ಕಂಪ್ಮೆಂಟ್ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಅವರ ಮೇಲೆ ತನಿಖೆ ಆಗಿರುವ ನನಗೆ ಗೊತ್ತಿಲ್ಲ. ಆ ಬಗ್ಗೆ ಪಿರ್ಯಾದು ಕೊಡುವಾಗ ನನಗೆ ತಿಳಿಸಿಲ್ಲ. ನನ್ನ ಮಗಳು ಈಗ ನನ್ನ ಜೊತೆಯಲ್ಲಿ ವಾಸವಿದ್ದಾಳೆ. ನನ್ನ ಮಗಳು ಮತ್ತು ನನ್ನ ಹೆಸರ ಮೇಲೆ ಸದರಿ ಮನೆಯಿದೆ. ನನ್ನ ಜೊತೆ ಎದುರುದಾರಳು ಯಾವಾಗಿನಿಂದ ನನ್ನ ಜೊತೆ ವಾಸವಿದ್ದಾಳೆ ಎಂದರೆ ಆಕೆ ಜಗಳ ಆಡಿ ಹೊರಕ್ಕೆ ಹಾಕಿದ ನಂತರ ಬಂದಿದ್ದಾಳೆ. ಆ ರೀತಿ ಆದ ಎಷ್ಟು ದಿನಗಳ ನಂತರ ಮನೆ ಖರೀದಿ ಮಾಡಿದ್ದೀರಾ ಎಂದರೆ ಅದಕ್ಕಿಂತ ಮುಂಚೆನೆ ಖರೀದಿ ಮಾಡಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಮನೆ ಕೊಂಡುಕೊಂಡ ನಂತರ ಗಲಾಟೆಗಳು ಆಗುತ್ತಿದ್ದವು. ಮೂರು ನಾಲ್ಕು ಬಾರಿ ಗಲಾಟೆ ಆಗಿದೆ. ಪಂಚಾಯ್ತಿ ಮಾಡಿಸಿದ್ದೇವು. ಸದರಿ ಪಂಚಾಯ್ತಿಯಲ್ಲಿ ಮಗಳನ್ನು ಮತ್ತು ಅಳಿಯನಿಗೂ ಬುದ್ದಿ ಹೇಳಿರುತ್ತೇವೆ. ನನ್ನ ಮಗಳು ಆಕೆಯ ಗಂಡನ ಮೇಲೆ ಆರೋಪ ಮಾಡಿದ್ದಾಳೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಗಂಡ ಹೆಂಡತಿ ವಿಚಾರ ಎಂದು ನುಡಿಯುತ್ತಾರೆ.

ಮಕ್ಕಳು ಅರ್ಜಿದಾರರ ಜೊತೆ ವಾಸವಿದ್ದಾರೆ ಎಂದರೆ ಮಗಳ ಜೊತೆ ಇರಲು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಮೊಮ್ಮಗ ಹಾಸ್ಟೆಲ್ ನಲ್ಲಿ ಇರುವ ವಿಚಾರ ಗೊತ್ತಿದೆ. ಅರ್ಜಿದಾರರು ತಹಶೀಲ್ದಾರ್ ಆಗಿರುವುದರಿಂದ ಅವರು ಲೇಟಾಗಿ ಬರುತ್ತಾರೆ. ಅವರು ಲೇಟಾಗಿ ಬರುತ್ತಾರೆ ಎಂದು ನನ್ನ ಮಗಳು ಗಲಾಟೆ ಮಾಡುತ್ತಿದ್ದಳು ಎಂದರೆ ಸಾಕ್ಷಿಯು ಅವರು ಲೇಟಾಗಿ ಬರುತ್ತಿದ್ದರು ನಾನು ಹೋಗಿ ನನ್ನ ಮಗಳ ಜೊತೆ ಹೋಗಿ ಮಲಗಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. 2022 ರವರೆಗೂ ಅವರು ಚೆನ್ನಾಗಿದ್ದರು. ಸಾಲಗಳು ಮತ್ತು ಲೇಟಾಗಿ ಬರುವ ಕಾರಣ ಜಗಳ ಆಗುತ್ತಿತ್ತು. ಅರ್ಜಿದಾರರಾದ ತಹಶೀಲ್ದಾರ್ ಮೇಲೆ ಅರ್ಜಿಗಳ ಮೇಲೆ ಅರ್ಜಿಗಳನ್ನು ಕೊಟ್ಟು ನನ್ನ ಮಗಳು ದೌರ್ಜನ್ಯ ಮಾಡಿದ್ದಾಳೆ ಎಂದರೆ ಸರಿಯಲ್ಲ. ಅಕ್ಕ ತಂಗಿಯರ ಜೊತೆ ಮಾತನಾಡಿದ್ದಕ್ಕೆ ಅನೈತಿಕ ಸಂಬಂಧ ಹೇಳುತ್ತಿದ್ದಳು ಎಂದರೆ ಸರಿಯಲ್ಲ. ಈಗಲೂ ಅವರ ಮೇಲೆ ಸುಳ್ಳು ಕೇಸು ಹಾಕಿ ಕಿರುಕುಳ ಕೊಡುತ್ತಿದ್ದಾಳೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ನೋಟಿಸ್ ಕೊಟ್ಟಿದ್ದಕ್ಕೆ ಆ ಕೇಸನ್ನು ಹಾಕಿದ್ದಾರೆ ಎಂದರೆ ಸರಿ. ನಾನು ಅಳಿಯನಿಗೆ ಯಾವುದೇ ಚೈನು ಬಂಗಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರಳಾಗಿ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. ಯಾವುದೇ ಪರಿಸ್ಥಿತಿಯಲ್ಲಿ ಅರ್ಜಿದಾರರು ಎದುರುದಾರರ ಜೊತೆ ಸಂಸಾರ ಮಾಡಲು ಸಾಧ್ಯವಿಲ್ಲ ಮಕ್ಕಳು ಜೊತೆ ಇರಲು ಬಯಸುವುದಿಲ್ಲ ಎಂದರೆ ನಾವು ಅವರು ಚೆನ್ನಾಗಿರುವುದನ್ನು

ಬಯಸುತ್ತೇನೆ. ಸುಳ್ಳು ಆರೋಪ ಮಾಡಿ ಸುಳ್ಳು ಕೇಸು ಕೊಟ್ಟು ಕಿರುಕುಳ ಕೊಟ್ಟಿರಿಂದ ಈ ಕೇಸನ್ನು ಹಾಕುವ ಪರಿಸ್ಥಿತಿ ಬಂದಿದೆ ಎಂದರೆ ಸರಿಯಲ್ಲ. ಮಗಳು ಮತ್ತು ಅಳಿಯನಿಗೆ ಬುದ್ದಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಮತ್ತು ಅಳಿಯ ಹೊಂದಾಣಿಕೆ ಆಗುವ ಸಾದ್ಯತೆ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ**
**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**